MR. SPEAKER : Full answers can be given by the concerned Minister.He can tell about the ramifications, about Agricultural development. ಸೋಮವಾರ ಅವರ ಬಿಸಿನೆಸ್ ಇದೆ, ಅವತ್ತು ಮಾಡಿಸಿಕೊಡುತ್ತೇನೆ.

ಅಧ್ಯಕ್ಷರು : ಪ್ರಶ್ನೆ ಸಂಖ್ಯೆ : 173(1377) ಅನಂತರ ತೆಗೆದುಕೊಳ್ಳೋಣ. ಸಾರಿಗೆ ಮಂತ್ರಿಗಳು ಕೌನ್ಸಿಲ್‌ನಲ್ಲಿ ಇದ್ದಾರೆ.

ಭೂ ನ್ಯಾಯ ಮಂಡಲಿಯಲ್ಲಿನ ಬಾಕಿ ಅರ್ಜಿಗಳು

175 - ಶ್ರೀ ವಸಂತ ವಿ. ಸಾಲಿಯಾನ (ಕಾಪು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂ ನ್ಯಾಯ ಮಂಡಲಿಯಲ್ಲಿ ಇತ್ಯರ್ಥಕ್ಕೆ ಬಾಕಿ ಇರುವಂತಹ ಅರ್ಜಿಗಳು ಎಷ್ಟು? (ಅರ್ಜಿ ನಮೂನೆ 2ಎ ಮತ್ತು 7ರ ಬಗ್ಗೆ ಪ್ರತ್ಯೇಕವಾಗಿ ತಾಲ್ಲೂಕುವಾರು ವಿವರವನ್ನು ನೀಡುವುದು).

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು) :

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂ ನ್ಯಾಯ ಮಂಡಳಿಯ ಮುಂದೆ ಇತ್ಯರ್ಥಕ್ಕೆ ಬಾಕಿ ಇರುವ ಪ್ರಕರಣಗಳು ಈ ಕೆಳಗಿನಂತಿವೆ: (ನಮೂನೆ 2ಎ ಮತ್ತು 7ರಂತೆ).

ತಾಲ್ಲೂಕು	ನಮೂನೆ 2ಎ ಮನೆ ನಿವೇಶನ ಅರ್ಜಿ ಕಲಂ 38		ನಮೂನೆ 7ರ ಅರ್ಜಿ ಕಲಂ 48		ಒಟ್ಟು	
	ಮೂಲ ಅರ್ಜಿ	ಮರು ವಿಚಾರಣೆಗೆ ಬಂದ ಅರ್ಜಿ	ಮೂಲ ಅರ್ಜಿ	ಮರು ವಿಚಾರಣೆಗೆ ಬಂದ ಅರ್ಜಿ	ಮೂಲ ಅರ್ಜಿ	ಮರು ವಿಚಾರಣೆಗೆ ಬಂದ ಅರ್ಜಿ
1	2	3	4	5	6	7
1. ಕುಂದಾಪುರ	-	6	-	351	6	351
2. ಕಾರ್ಕಳ	20	1	2	322	21	324
3. ಉಡುಪಿ	66	24	-	11	90	611
4. ಮಂಗಳೂರು	-	-	3	39	-	42
5. ಬಂಟ್ವಾಳ	172	3	3	436	175	439
6. ಬೆಳ್ತಂಗಡಿ	-	1	-	10	1	10
7. ಪುತ್ತೂರು	-	-	-	6	-	6
8. ಸೂಳ್ಯ	-	-	-	5	-	5
ಒಟ್ಟು	**258**	**35**	**8**	**1780**	**293**	**1788**

ಶ್ರೀ ವಸಂತ ವಿ. ಸಾಲಿಯಾನ : ಮಾನ್ಯ ಅಧ್ಯಕ್ಷರೇ, ನಾನು ಕೇಳಿದ ವಿಚಾರ ಏನೆಂದರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂನ್ಯಾಯ ಮಂಡಲಿಯಿಂದ ಇತ್ಯರ್ಥವಾಗದೇ ಬಾಕಿ ಇದ್ದಂತಹ ಅರ್ಜಿಗಳು ಎಷ್ಟು ಎಂದು. ಆದರಲ್ಲಿ 2ಎ ಮತ್ತು 7ರಲ್ಲಿ ಸರಿಯಾದಂತಹ ಉತ್ತರವನ್ನು ಮಾನ್ಯ ಮಂತ್ರಿಗಳು ಕೊಟ್ಟಿಲ್ಲ. ಅಲ್ಲಿ ಏನಾಗಿದೆ ಎಂದರೆ, ಒಂದು ಕಡೆ ಮೂಲತಃ ಅರ್ಜಿ 258. ಮರುವಿಚಾರಣೆಗೆ ಬಂದಂತಹ ಅರ್ಜಿ 35, ಮೂಲ ಅರ್ಜಿ 8, ಇದು 2ಎ ನಲ್ಲಿ ಇದೆ. ಅದು ಸರಿಯಿಲ್ಲವೆಂದು ಹೇಳುತ್ತಿದ್ದೇನೆ.

ಶ್ರೀ ರಮೇಶ್ ಎಸ್. ಜಿಗಜಿಣಗಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳುವುದರಲ್ಲಿ ನಿಜವಿದೆ. ಕಾಲಂ 2ರಲ್ಲಿ ಇರತಕ್ಕಂಥ 258 ಅರ್ಜಿಗಳ ಜೊತೆಗೆ ಕಾಲಂ (7)ರಲ್ಲಿ ಇರತಕ್ಕಂಥದ್ದು 8, ಇದು ಎರಡೂ ಸೇರಿಸಿದರೆ ಮೊದಲನೆ ಪ್ರಶ್ನೆ ಮೂಲ ಅರ್ಜಿಗಳು ಎಷ್ಟು ಎನ್ನುವುದಕ್ಕೆ ಉತ್ತರ ಸಿಗುತ್ತದೆ. ಮತ್ತೆ ಕಾಲಂ 3 ಮತ್ತು ಕಾಲಂ 5 ಈ ಎರಡೂ ಟೋಟಲ್ ಮಾಡುವುದರಲ್ಲಿ ಸ್ವಲ್ಪ ವ್ಯತ್ಯಾಸವಾಗಿದೆ. ಅದರ ಉತ್ತರ 1780 ಪ್ಲಸ್ 35. ಇದು ಎರಡೂ ಸೇರಿಸಿದರೆ ಮರುವಿಚಾರಣೆ ಅರ್ಜಿಗಳ ಸಂಖ್ಯೆ. ಕಾಲಂ 2 ಮತ್ತು ಕಾಲಂ 2ಎ ಎರಡೂ ಸೇರಿಸಿ ಟೋಟಲ್ ಮಾಡಿದರೆ ಮೂಲ ಅರ್ಜಿಗಳ ಸಂಖ್ಯೆ ಸಿಗುತ್ತದೆ. ಸ್ವಲ್ಪ ವ್ಯತ್ಯಾಸವಾಗಿದೆ.

ಶ್ರೀ ವಸಂತ್ ವಿ. ಸಾಲಿಯಾನ : ಬಾಕಿ ಇರತಕ್ಕಂಥ ಅರ್ಜಿಗಳು ಹೈಕೋರ್ಟ್‌ನಲ್ಲಿ ಸುಮಾರು ಅನೇಕ ಬಾರಿ ರಿವಿಜನ್‌ಗೆ ಬಂದಂತಹ ಅರ್ಜಿಗಳು. ಅದರಲ್ಲಿ ತಾವು ಇತ್ಯರ್ಥ ಮಾಡುವಂತಹ ಸಂದರ್ಭದಲ್ಲಿ ಬಹಳ ಪ್ರಮುಖವಾದಂತಹ ಕೇಸುಗಳು ಇವು. ಅದಕ್ಕೆ ಸ್ಥಳ ಪರಿಶೀಲನೆ ಮಾಡಿ ದಾಖಲೆಗಳನ್ನು ಪರಿಶೀಲನೆ ಮಾಡಿ ಮತ್ತು ಕೃಷಿ ಭೂಮಿಗಳ ಬಗ್ಗೆ ವಿಚಾರಣೆ ಮಾಡಿ ಮನೆ ಇದೆಯೇ ಅಥವಾ ಕೃಷಿಗಳು ಇದ್ದರೆ ಸ್ವಾಧೀನತೆ ಬಗ್ಗೆ ತಾವು ಇತ್ಯರ್ಥ ಮಾಡುವಾಗ ಈ ಕೆಲವು ಮುಖ್ಯವಾದ ಅಂಶಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಕೇವಲ ನಾವು ಆಫೀಸ್‌ನಲ್ಲಿ ಕುಳಿತುಕೊಂಡು ಅರ್ಜಿಗಳನ್ನು ವಿಲೇವಾರಿ ಮಾಡಿದರೆ ಕೆಲವು ಕೃಷಿ ಕಾರ್ಮಿಕರಿಗೆ ಅದೇ ರೀತಿಯಲ್ಲಿ ಭೂಮಾಲೀಕರಿಗೆ ಇರಬಹುದು ಅಥವಾ ಡಿಕ್ಲೆರೇಷನ್ ಕೊಟ್ಟವರಿಗೆ ಅನ್ಯಾಯವಾಗುವಂತಹ ಪರಿಸ್ಥಿತಿ ಈಗ ನಿರ್ಮಾಣವಾಗಿದೆ. ಬಾಕಿ ಉಳಿದಿರುವ ಕೇಸಗಳಿಲ್ಲ ಬಹಳ ಕಾಂಪ್ಲಿಕೇಟೆಡ್ ಕೇಸ್‌ಗಳು ಅದಕ್ಕೆ ಸರ್ಕಾರಕ್ಕೆ ಅಧ್ಯಕ್ಷರ ಮುಖೇನ ಕೇಳುವುದೇನೆಂದರೆ, ಇದನ್ನು ಪರಿಶೀಲನೆ ಮಾಡಿ ಜಡ್ಜ್‌ಮೆಂಟ್ ಮಾಡುವಾಗ ಸರಿಯಾದ ರೀತಿಯಲ್ಲಿ ಜಡ್ಜಮೆಂಟ್ ಮಾಡಬೇಕಾಗಿ ಒತ್ತಾಯಿಸುತ್ತೇನೆ.

ಶ್ರೀ ರಮೇಶ್ ಸಿ. ಜಿಗಜಿಣಗಿ : ಮಾನ್ಯ ಸದಸ್ಯರು ಹೇಳಿದ ಸಲಹೆಯನ್ನು ಗಮನದಲ್ಲಿಟ್ಟುಕೊಂಡು ಪುನಃ ಒಂದು ಸೂಚನೆಯನ್ನು ನೀಡಲಾಗುವುದು.

ಅಧ್ಯಕ್ಷರು : ಹೆಚ್.ಡಿ. ಬಸವರಾಜ್‌ರವರೆ ನಿಮ್ಮ ಪ್ರಶ್ನೆ ಸಂಖ್ಯೆ : 136(1424)ಕ್ಕೆ ಮಾನ್ಯ ಮಂತ್ರಿಗಳು ಉತ್ತರ ಕೊಡುವುದಕ್ಕೆ ಇಲ್ಲ. ಅವರು ಕೌನ್ಸಿಲ್‌ನಲ್ಲಿ ಇದ್ದಾರೆ. ಬಸ್ ವಿಚಾರ ಅಲ್ಲಿ ಚರ್ಚೆ ನಡೆಯುತ್ತಿದೆ. ಅಲ್ಲಿ ಮುಗಿಸಿಕೊಂಡು ಬರುತ್ತೇನೆ ಎಂದು ಹೇಳಿದ್ದಾರೆ. ಪಾರ್ಲಿಮೆಂಟರಿ ಅಫೇರ್ಸ್ ಮಿನಿಸ್ಟರ್ ಇಲ್ಲ. ಚೀಫ್ ವಿಪ್‌ಗೆ ಆರೋಗ್ಯ ಸರಿ ಇಲ್ಲ. ಇನ್ನು ಹಿರಿಯ ಸಚಿವರಾದ ಪ್ರಕಾಶ್‌ರವರು ಇಲ್ಲ, ನಾಣಯ್ಯನವರು ಇಲ್ಲ. ಹಿರಿಯ ಸಚಿವರೆಂದರೆ ಮಾನ್ಯ ನಾಗೇಗೌಡರು ಇದ್ದಾರೆ. ಈಗ ಏನು ಮಾಡಬೇಕು. ನಿಮ್ಮ ಮಾರ್ಗದರ್ಶನಕ್ಕೆ ಕಾಯಬೇಕು.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೇ, ಕೆಎಸ್ಆರ್‌ಟಿಸಿ ವಿಚಾರಕ್ಕೆ ಎಲ್ಲಾ ಮೇಲ್ಮನೆಯಲ್ಲಿ ಇದ್ದಾರೆ.

ಅಧ್ಯಕ್ಷರು : ನಾನು ಏನು ಮಾಡಬೇಕು? ಇದು ಪ್ರಶ್ನೋತ್ತರ ವೇಳೆ. ಇಲ್ಲಿ ಮುಖ್ಯಸಚೇತಕರು ಇಲ್ಲ. ಪಾರ್ಲಿಮೆಂಟರಿ ಅಫೇರ್ಸ್ ಮಿನಿಸ್ಟರ್ ಇಲ್ಲ.

ಶ್ರೀ ಕೆ.ಎನ್. ನಾಗೇಗೌಡ : ಪ್ರಶ್ನೆಯನ್ನು ಹೆಲ್ಡ್ ಓವರ್ ಮಾಡಿ, ಸೋಮವಾರ ತೆಗೆದುಕೊಳ್ಳೋಣ.

ಅಧ್ಯಕ್ಷರು : ಆಯಿತು.

ಬೆಂಗಳೂರು ನಗರದ ಎಪಿಎಂಸಿಯಲ್ಲಿ ವ್ಯವಸ್ಥೆ ಕುರಿತು.

178 - ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು ನಗರದ ಯಶವಂತಪುರದಲ್ಲಿರುವ ಎಪಿಎಂಸಿ ಯಾರ್ಡ್‌ನಲ್ಲಿ ಇರುವ ಅಂಗಡಿ ಮಳಿಗೆಗಳೆಷ್ಟು;*

ಆ) *ಹೊಸದಾಗಿ ನಿರ್ಮಿಸಲಾಗಿರುವ ಅನೇಕ ಮಳಿಗೆಗಳನ್ನು ಇನ್ನು ಹಂಚಿಕೆದಾರರು ತೆರೆಯದಿರುವ ಅಂಶವು ಸರ್ಕಾರದ ಗಮನಕ್ಕೆ ಬಂದಿದೆಯೇ? ಈ ಅಂಗಡಿಗಳನ್ನು ತೆರೆಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು;*

ಇ) *ಆರ್ ಎಂ ಸಿ ಪ್ರಾಂಗಣದಲ್ಲಿ ಇರುವ ಹಣ್ಣು ತರಕಾರಿ ಮಾರಾಟಗಾರರ ಸಂಖ್ಯೆ ಎಷ್ಟು? ಈ ಮಾರಾಟಗಾರರು ಮೂಲಭೂತ ಸೌಲಭ್ಯಗಳಿಂದ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಈ ಬಗ್ಗೆ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?*

ಶ್ರೀ ಹೆಚ್. ನಾಗಪ್ಪ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) ಬೆಂಗಳೂರು ನಗರದ ಯಶವಂತಪುರ ಎಪಿಎಂಸಿ ಯಾರ್ಡ್‌ನಲ್ಲಿ ಪೇಟೆ ಕಾರ್ಯಕರ್ತರುಗಳನ್ನೊಳಗೊಂಡ ಸಮಿತಿಯ ಮಾಲೀಕತ್ವ ಹೊಂದಿರುವ 669 ಅಂಗಡಿ-ವ-ಗೋದಾಮ ಮತ್ತು 60 ಮಳಿಗೆಗಳು ಈ ರೀತಿ ಒಟ್ಟು 729 ಅಂಗಡಿ ಮಳಿಗೆಗಳು ಇರುತ್ತವೆ.

ಆ) ಹೌದು. ಮಾರುಕಟ್ಟೆ ಪ್ರಾಂಗಣದ ಬಿ.ಡಿ.ಎ. ಬ್ಲಾಕ್‌ನಲ್ಲಿ 93 ಗೋದಾಮುಗಳನ್ನು ಲೀವ್-ಅಂಡ-ಲೈಸನ್ಸ್ ಮೇರೆಗೆ ಮತ್ತು 80 ಗೋದಾಮುಗಳನ್ನು 25:75 ಯೋಜನೆ ಯಡಿಯಲ್ಲಿ ಪೇಟೆ ಕಾರ್ಯಕರ್ತರಿಗೆ ಹಂಚಲಾಗಿದ್ದು, ಸದರಿಯವರು ಈ ಗೋದಾಮುಗಳಲ್ಲಿ ವ್ಯಾಪಾರ ವಹಿವಾಟು ನಡೆಸುತ್ತಿಲ್ಲವಾದ್ದರಿಂದ ಪೇಟೆ ಕಾರ್ಯಕರ್ತರಿಗೆ ಹಲವಾರು ತಿಳುವಳಿಕೆ ಪತ್ರ ನೀಡಲಾಗಿದೆ. ಮತ್ತು ಇವುಗಳಲ್ಲಿ ವ್ಯಾಪಾರ ವಹಿವಾಟು ಪ್ರಾರಂಭಿಸಲು ಮಾರುಕಟ್ಟೆ ಸಮಿತಿಯು ಕ್ರಮ ಕೈಗೊಳ್ಳುತ್ತಿದೆ.